# ರ್‍ಯಾಗಿಂಗ್: ಕಡಿವಾಣವಿಲ್ಲವೇ?

ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಕಾಲೇಜು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಪ್ರಕರಣಗಳ ಸಂಖ್ಯೆ ಜಾಸ್ತಿಯಾಗಿದ್ದು, ಇದೊಂದು ಆತಂಕಕಾರಿ ಬೆಳವಣಿಗೆ. ಕಳೆದ ವರ್ಷ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಒಟ್ಟು 901 ರ್‍ಯಾಗಿಂಗ್ ಪ್ರಕರಣಗಳು ದಾಖಲಾಗಿದ್ದು, 2016ಕ್ಕೆ ಹೋಲಿಸಿದರೆ ಈ ಪ್ರಮಾಣ ಶೇ.75ರಷ್ಟು ಹೆಚ್ಚಾದಂತಾಗಿದೆ. 2016ರಲ್ಲಿ ದಾಖಲಾಗಿದ್ದ ಪ್ರಕರಣಗಳ ಸಂಖ್ಯೆ 515. ಈ ಸಂಖ್ಯೆ ರ್‍ಯಾಗಿಂಗ್ ಸಮಸ್ಯೆ ಎಷ್ಟು ಆಳವಾಗಿ ಬೇರೂರಿದೆ ಎಂಬುದಕ್ಕೆ ನಿದರ್ಶನ.

ಇಂತಹ ಹೀನಾಯವಾದ ಕೃತ್ಯಗಳ ಪ್ರಮಾಣ ಅತ್ಯಂತ ಹೆಚ್ಚಾಗಿರುವ ರಾಜ್ಯಗಳೆಂದರೆ ಗುಜರಾತ್ ಹಾಗೂ ಅಸ್ಸಾಂ. 2016ರಲ್ಲಿ ಅನುಕ್ರಮವಾಗಿ ಐದು ಹಾಗೂ 10 ಪ್ರಕರಣಗಳು ದಾಖಲಾಗಿದ್ದ ಈ ಎರಡು ರಾಜ್ಯಗಳಲ್ಲಿ ಕಳೆದ ವರ್ಷ ದಾಖಲಾದ ದೂರುಗಳ ಸಂಖ್ಯೆ 16 ಮತ್ತು 33. ಅಂದರೆ ಮೂರು ಪಟ್ಟಿಗಿಂತ ಅಧಿಕ. ಕರ್ನಾಟಕ ರಾಜ್ಯವೇನೂ ಇದರಲ್ಲಿ ಹಿಂದೆ ಬಿದ್ದಿಲ್ಲ. 2016ರಲ್ಲಿದ್ದ ಪ್ರಕರಣಗಳ ಸಂಖ್ಯೆ 24. ಈಗ ಅದು 49ಕ್ಕೆ ಏರಿದೆ. ಇದೇ ರೀತಿ ರ್‍ಯಾಗಿಂಗ್ ಪ್ರಕರಣಗಳು ಎರಡರಷ್ಟು ಹೆಚ್ಚಾದ ಇತರ ರಾಜ್ಯಗಳೆಂದರೆ ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರಾಖಂಡ.

ಮೊದಲೆಲ್ಲ ರ್‍ಯಾಗಿಂಗ್ ಹಾವಳಿ ಎಂದರೆ ಉತ್ತರದ ರಾಜ್ಯಗಳೆಡೆ ನೋಡುವಂತಾಗಿತ್ತು. ಆದರೆ ಅದೀಗ ದಕ್ಷಿಣದ ರಾಜ್ಯಗಳಲ್ಲೂ ತನ್ನ ವಿಕೃತ ಮುಖ ತೋರಿಸುತ್ತಿದೆ. ದಾಖಲಾದ ಪ್ರಕರಣಗಳೇ ಇಷ್ಟು ಬೃಹತ್ ಸಂಖ್ಯೆಯಲ್ಲಿರುವಾಗ ದಾಖಲಾಗದೇ ಉಳಿದವುಗಳೆಷ್ಟೋ. ಎಷ್ಟೊ ಪ್ರಕರಣಗಳಲ್ಲಿ ರ್‍ಯಾಗಿಂಗ್ ಸಂತ್ರಸ್ತರು ದೂರು ನೀಡಲು ಹಿಂಜರಿಯುವುದು ಸಾಮಾನ್ಯ. ರ್‍ಯಾಗಿಂಗ್ ಮಾಡುವ ಹಿರಿಯ ವಿದ್ಯಾರ್ಥಿಗಳಿಗೆ ಹೆದರಿ ಅಥವಾ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರ ಒತ್ತಡದಿಂದಾಗಿ ಪ್ರಕರಣ ದಾಖಲಿಸಲು ಎಷ್ಟೋ ವಿದ್ಯಾರ್ಥಿಗಳು ಮುಂದೆ ಬರುವುದಿಲ್ಲ. ಜೊತೆಗೆ ನೀಡಿದ್ದ ದೂರನ್ನೂ ವಾಪಸ್ಸು ತೆಗೆದುಕೊಂಡ ಹಲವು ಉದಾಹರಣೆಗಳಿವೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ (ಯುಜಿಸಿ) ನೇಮಿಸಿದ ಅಧ್ಯಯನ ಸಮಿತಿಯ ವರದಿಯ ಪ್ರಕಾರ ಶೇ. 84ರಷ್ಟು ರ್‍ಯಾಗಿಂಗ್ ಸಂತ್ರಸ್ತರು ದೂರು ನೀಡಲು ಹಿಂಜರಿಯುತ್ತಾರಂತೆ. ಹಿರಿಯ ವಿದ್ಯಾರ್ಥಿಗಳು ನೀಡುವ ಮಾನಸಿಕ ಕಿರುಕುಳ, ದೈಹಿಕ ಹಲ್ಲೆ ಇದಕ್ಕೆ ಕಾರಣ ಎಂದಿದೆ ವರದಿ. ಇನ್ನೊಂದು ಮುಖ್ಯ ಕಾರಣವೆಂದರೆ ನ್ಯಾಯಾಂಗ ವ್ಯವಸ್ಥೆಯಲ್ಲಿರುವ ಅಪನಂಬಿಕೆ.

ಈ ಹಿಂದೆ ರ್‍ಯಾಗಿಂಗ್ ಅನ್ನು ವಿದ್ಯಾರ್ಥಿಗಳ ಪೋಷಕರಾಗಲಿ ಅಥವಾ ಶೈಕ್ಷಣಿಕ ಸಂಸ್ಥೆಗಳಾಗಲಿ ಅಷ್ಟೊಂದು ಗಂಭೀರವಾಗಿ ಪರಿಗಣಿಸಿರಲಿಲ್ಲ ಎನ್ನಬಹುದು. ಹಿರಿಯ ವಿದ್ಯಾರ್ಥಿಗಳು ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಛೇಡಿಸಿ ಮನರಂಜನೆ ಪಡೆಯುವುದಕ್ಕಷ್ಟೇ ಸೀಮಿತಗೊಂಡಿತ್ತು. ರ್‍ಯಾಗಿಂಗ್‌ನಿಂದ ಅವಮಾನಗೊಂಡ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು, ಮಾನಸಿಕವಾಗಿ ಘಾಸಿಗೊಂಡ ವಿದ್ಯಾರ್ಥಿಯ ಭವಿಷ್ಯವನ್ನೇ ಅಂಧಕಾರಕ್ಕೆ ದೂಡಿದ ಪ್ರಕರಣಗಳು ದಾಖಲಾಗುತ್ತಿದ್ದಂತೆ ಸುಪ್ರೀಂಕೋರ್ಟ್ ರಂಗಕ್ಕೆ ಇಳಿಯಬೇಕಾಯಿತು. ಆಗ ಎಚ್ಚೆತ್ತುಕೊಂಡ ಯುಜಿಸಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ನಿಷೇಧಿಸಿತು; ನಿಗಾ ಸಮಿತಿಗಳನ್ನು ರಚಿಸಿತು. ರ್‍ಯಾಗಿಂಗ್ ತಡೆಯಲು ವಿಫಲವಾದ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರನ್ನು ಶಿಕ್ಷಿಸುವ ಕಾನೂನು ಕೂಡಾ ಇದೆ.

ಆದರೆ ಇಂತಹ ಕಠಿಣ ಕ್ರಮಗಳು ಆರಂಭದಲ್ಲಿ ಕೆಲಸ ಮಾಡಿದಂತೆ ಕಂಡರೂ ಇತ್ತೀಚಿನ ವರ್ಷಗಳಲ್ಲಿ ರ್‍ಯಾಗಿಂಗ್ ಪ್ರಕರಣಗಳು ಜಾಸ್ತಿಯಾಗಿವೆ. ಇದಕ್ಕೆ ಕಾರಣ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿ ಎನ್ನುತ್ತಾರೆ ಮನಃಶಾಸ್ತ್ರಜ್ಞರು. ದುರ್ಬಲರು ಅಂದರೆ ಕಿರಿಯ ವಿದ್ಯಾರ್ಥಿಗಳ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸಿ ಅವರನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎಂಬ ಮನಃಸ್ಥಿತಿ. ಇದು ಹದಿಹರೆಯದಲ್ಲಿ ಅಧಿಕ. ಜೊತೆಗೆ ಹೊರಗಿನವರು, ಬೇರೆ ಭಾಷೆ, ಪ್ರದೇಶದವರ ಮೇಲೆ ರ್‍ಯಾಗಿಂಗ್ ಮಾಡುವುದು ಹೆಚ್ಚು ಎನ್ನುತ್ತದೆ ಅಧ್ಯಯನ. ಹೆಚ್ಚಿನ ಪ್ರಕರಣಗಳಲ್ಲಿ ಲಘುವಾದ ಛೇಡಿಸುವಿಕೆಗೆ ಮಾನಸಿಕ ಹಾಗೂ ದೈಹಿಕ ಕ್ರೌರ್ಯ ಅಂಟಿಕೊಳ್ಳುತ್ತದೆ. ಕಲಬುರಗಿಯಲ್ಲಿ ಕೇರಳದ ನರ್ಸಿಂಗ್ ವಿದ್ಯಾರ್ಥಿನಿಯೊಬ್ಬಳಿಗೆ ಶೌಚಾಲಯ ಸ್ವಚ್ಛಗೊಳಿಸುವ ದ್ರಾವಣವನ್ನು ಕುಡಿಸಿ ಆಕೆಯ ಅನ್ನನಾಳಕ್ಕೇ ಧಕ್ಕೆಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಲೈಂಗಿಕ ಕಿರುಕುಳವಂತೂ ಸಾಮಾನ್ಯ.

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಹಾಗೂ ಯುಜಿಸಿ ಈಗಾಗಲೇ ಜಿಲ್ಲಾಮಟ್ಟದಲ್ಲಿರುವ ರ್‍ಯಾಗಿಂಗ್ ವಿರೋಧಿ ಸಮಿತಿ ಹಾಗೂ ನಿಗಾ ಸಮಿತಿಗಳ ಕಾರ್ಯವೈಖರಿಯ ಪರಿಶೀಲನೆ ಆರಂಭಿಸಿವೆ. ಶೈಕ್ಷಣಿಕ ಸಂಸ್ಥೆಗಳು ಈಗಾಗಲೇ ಇರುವ ಕಠಿಣ ಕಾನೂನುಗಳನ್ನು ಜಾರಿಗೊಳಿಸಿದರೆ ಸಾಕು. ಸಂತ್ರಸ್ತ ವಿದ್ಯಾರ್ಥಿಗಳೂ ದೂರು ದಾಖಲಿಸಲು ಮುಂದೆ ಬರಬೇಕು; ಈ ಕುರಿತು ಅಸ್ತಿತ್ವದಲ್ಲಿರುವ ಸಹಾಯವಾಣಿ, ಆನ್‌ಲೈನ್ ಗ್ರೂಪ್‌ನ ನೆರವು ಪಡೆಯಬೇಕು.

■ ಸುಧಾ ಹೆಗಡೆ

ಮೊದಲೆಲ್ಲ ರ್‍ಯಾಗಿಂಗನ್ನು ವಿದ್ಯಾರ್ಥಿಗಳಾಗಲಿ, ಪೋಷಕರಾಗಲಿ ಗಂಭೀರವಾಗಿ ಪರಿಗಣಿಸಿರಲಿಲ್ಲ. ಹಿರಿಯ ವಿದ್ಯಾರ್ಥಿಗಳು ಕಿರಿಯರನ್ನು ರಂಜನೆಗೆ ಛೇಡಿಸುತ್ತಾರೆ. ಆರಂಭದಲ್ಲಿ ಇದೆಲ್ಲ ಮಾಮೂಲು ಎಂದು ಭಾವಿಸಲಾಗಿತ್ತು. ಕಾಲಕ್ರಮೇಣ ಅದರ ಪರಾಕಾಷ್ಠೆ ಅವಮಾನಕರ ಹಂತ ತಲುಪಿ ಆತ್ಮಹತ್ಯೆ ಪ್ರಕರಣಗಳು ನಡೆದವು. ಆಗ ಅದರ ನಿಯಂತ್ರಣಕ್ಕೆ ಕಠಿಣ ಕಾಯ್ದೆ ರೂಪುಗೊಂಡಿತು. ಆದರೂ ರ್‍ಯಾಗಿಂಗ್ ಭೀಕರತೆ ಏಕೆ ಕಡಿಮೆಯಾಗಿಲ್ಲ?

